# ಕರ್ನಾಟಕ ವಿಧಾನ ಪರಿಷತ್ತು

1) **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 2513
2) **ಸದಸ್ಯರ ಹೆಸರು** : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) **ಉತ್ತರಿಸಬೇಕಾದ ದಿನಾಂಕ** : 31-03-2021
4) **ಉತ್ತರಿಸಬೇಕಾದ ಸಚಿವರು** : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಗರ ಮತ್ಸ್ಯ ನೀತಿಯಂತೆ ಸ್ಥಳೀಯ ಮೀನು-ಕೃಷಿಕರು ಮತ್ತು ಅವುಗಳ ಸಂಘ-ಸಂಸ್ಥೆಗಳನ್ನೊಳಗೊಂಡಂತೆ ಸಾಗರದಲ್ಲಿನ ಮತ್ಸ್ಯ ಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳು ಯಾವುವು; | ಸಾಗರದಲ್ಲಿನ ಮತ್ಸ್ಯಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ಸರ್ಕಾರ ಈ ಕೆಳಗಿನಂತೆ ನೀತಿಯನ್ನು ರೂಪಿಸಿದೆ.<br>1. ಹೊಸ ಯಾಂತ್ರಿಕ ಮೀನುಗಾರಿಕೆ ದೋಣಿಗಳ ನೋಂದಣಿಯನ್ನು ನಿಯಂತ್ರಿಸಿದೆ.<br>2. ಹೊಸ ಪರ್ಸೀನ್ ದೋಣಿಗಳ ನೋಂದಣಿಯನ್ನು ಸ್ಥಗಿತಗೊಳಿಸಲಾಗಿದೆ.<br>3. ಬುಲ್ ಟ್ರಾಲಿಂಗ್ ನಿಷೇಧ.<br>4. ಬೆಳಕು ಮೀನುಗಾರಿಕೆ ನಿಷೇಧ.<br>5. ದೋಣಿಗಳ ಇಂಜಿನ್ ಅಳವಡಿಕೆಯಲ್ಲಿ ಅಶ್ವಶಕ್ತಿಯನ್ನು ಗರಿಷ್ಟ 350 ಹೆಚ್.ಪಿ.ಗೆ ಸೀಮಿತಗೊಳಿಸಿದೆ.<br>6. ಸಾಂಪ್ರದಾಯಿಕವಲ್ಲದ ಫಿಶ್ ಅಗ್ರಿಗೇಟಿಂಗ್ ಡಿವೈಸಸ್‌ಗಳ ಉಪಯೋಗಕ್ಕೆ ನಿಷೇಧ.<br>7. ಎಲ್ಲಾ ದೋಣಿಗಳ ನೋಂದಣಿ ಮತ್ತು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ.<br>8. ಪ್ರತಿವರ್ಷ ಜೂನ್-01 ರಿಂದ ಜುಲೈ-31 ರವರೆಗೆ 10 ಹೆಚ್.ಪಿ. ಗಿಂತ ಮೇಲ್ಪಟ್ಟು ಇಂಜಿನ್‌ವುಳ್ಳ ಮೋಟಾರೈಸ್ಡ್ ಮತ್ತು ಯಾಂತ್ರಿಕೃತ ದೋಣಿಗಳ ಬಳಕೆಯನ್ನು ನಿಷೇಧಿಸಿದೆ.<br>9. ಮೀನುಗಾರರು ಹಿಡಿಯುವ ಪ್ರಮುಖ 19 ಜಾತಿಯ ಮೀನುಗಾಳಿಗೆ ಕನಿಷ್ಟ ಗಾತ್ರದ ಮಿತಿ ನಿಗಧಿಪಡಿಸಲಾಗಿದೆ.<br>10. ಟ್ರಾಲ್ ದೋಣಿಗಳಲ್ಲಿ 35 ಮಿಲಿ ಮೀಟರ್ ಸ್ಕ್ವಯರ್ ಮೆಶ್ ಕಾಡ್ ಎಂಡ್ ಇರುವ ಬಲೆಗಳ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ.<br>ಕರ್ನಾಟಕ ಕಡಲು ಮೀನುಗಾರಿಕೆ ನಿಯಂತ್ರಣ ಕಾಯ್ದೆ, 1986 ನ್ನು ಜಾರಿಗೊಳಿಸಿದೆ.<br>ಸಾಗರದಲ್ಲಿನ ಮತ್ಸ್ಯಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು 2020-21ನೇ ಸಾಲಿನಿಂದ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಈ ಕೆಳಗಿನ ಕಾರ್ಯಕ್ರಮಗಳಿವೆ.<br>1. ಪಂಜರ ಮೀನು ಕೃಷಿ<br>2. ಕಡಲು ಕಳೆ ಕೃಷಿ |

-2-

| | | |
|---|---|---|
| ಅ) | ಈ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ದೊರೆತಿರುವ ಅನುದಾನವೆಷ್ಟು ಮತ್ತು ರಾಜ್ಯ ಸರ್ಕಾರ ಪೂರಕವಾಗಿ ನೀಡಿರುವ ಅನುದಾನವೆಷ್ಟು; (ಕಳೆದ 3 ವರ್ಷಗಳ ಜಿಲ್ಲಾವಾರು, ಯೋಜನೆವಾರು ಮತ್ತು ವರ್ಷಾವಾರು ಮಾಹಿತಿಯನ್ನು ನೀಡುವುದು). | ಈ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ರಾಜ್ಯ ಸರ್ಕಾರ ಪೂರಕವಾಗಿ ನೀಡಿರುವ ಅನುದಾನದ ಕಳೆದ 3 ವರ್ಷಗಳ ಜಿಲ್ಲಾವಾರು, ಯೋಜನೆವಾರು ಮತ್ತು ವರ್ಷಾವಾರು ವಿವರವನ್ನು **<u>ಅನುಬಂಧ-1</u>** ರಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಸಾಗರ ಮತ್ಸ್ಯವನ್ನು ಸಂರಕ್ಷಿಸಲು ಮತ್ತು ವಿವಿಧ ಯೋಜನೆಗಳನ್ನು ನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗುರುತಿಸಿರುವ ಇಲಾಖೆಗಳು ಮತ್ತು ಸಂಸ್ಥೆಗಳು ಯಾವುವು? (ವಿವರ ನೀಡುವುದು) | ರಾಜ್ಯದಲ್ಲಿ ಸಾಗರ ಮತ್ಸ್ಯವನ್ನು ಸಂರಕ್ಷಿಸಲು ಮತ್ತು ವಿವಿಧ ಯೋಜನೆಗಳನ್ನು ನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗುರುತಿಸಿರುವ ಇಲಾಖೆಗಳು ಮತ್ತು ಸಂಸ್ಥೆಗಳು ಈ ಕೆಳಗಿನಂತಿದೆ.<br>1. ಮೀನುಗಾರಿಕೆ ಇಲಾಖೆ.<br>2. ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು.<br>3. ಸೆಂಟ್ರಲ್ ಮೆರೈನ್ ಫಿಶರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್, ಮಂಗಳೂರು ಕೇಂದ್ರ, ಮಂಗಳೂರು<br>4. ಮೆರೈನ್ ಪ್ರಾಡಕ್ಟ್ಸ್, ಎಕ್ಸ್ಪೋರ್ಟ್ ಡೆವಲಪ್‌ಮೆಂಟ್ ಅಥಾರಿಟಿ, ಮಂಗಳೂರು.<br>5. ಅರಣ್ಯ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಸಂಬಂದಧಿಸಿದ ಇಲಾಖೆಗಳು.<br>6. ಒಳನಾಡು ಮತ್ತು ಜಲ ಸಾರಿಗೆ ಇಲಾಖೆ, ಕಾರವಾರ.<br>7. ಎಕ್ಸ್‌ಪೋರ್ಟ್ ಇನ್ಸ್ಪೆಕ್ಷನ್ ಏಜೆನ್ಸಿ. |

ಸಂಖ್ಯೆ: ಪಸಂಮೀ ಇ-145 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-3043(2513)ಕ್ಕೆ ಉತ್ತರ

## ಅನುದಾನ ಬಿಡುಗಡೆ ಕುರಿತು ಮಾಹಿತಿ

| ಜಿಲ್ಲೆ | ಯೋಜನೆ | ಕೇಂದ್ರ ಸರಕಾರದಿಂದ ಬಂದ ಅನುದಾನ (ರೂ ಲಕ್ಷಗಳಲ್ಲಿ) | ರಾಜ್ಯ ಸರಕಾರದಿಂದ ಬಂದ ಅನುದಾನ (ರೂ ಲಕ್ಷಗಳಲ್ಲಿ) | ಒಟ್ಟು ಅನುದಾನ ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|---|---|---|
| 2017-18 ನೇ ಸಾಲು | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ ವಿತರಣೆ | 0 | 0 | 0 | 0 |
| ಉಡುಪಿ | | 0 | 0 | 0 | 0 |
| ಉತ್ತರ ಕನ್ನಡ | | 0 | 0 | 0 | 0 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚೆಲೆ ಕೃಷಿ | 0 | 0 | 0 | 0 |
| ಉಡುಪಿ | | 0 | 0 | 0 | 0 |
| ಉತ್ತರ ಕನ್ನಡ | | 0 | 0 | 0 | 0 |
| 2018-19 ನೇ ಸಾಲು | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ ವಿತರಣೆ | 0 | 80.000 | 80.000 | 79.92314 |
| ಉಡುಪಿ | | 0 | 140.00000 | 140.00000 | 139.93694 |
| ಉತ್ತರ ಕನ್ನಡ | | 0 | 30.000 | 30.000 | 29.720 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚೆಲೆ ಕೃಷಿ | 0 | 0 | 0 | 0 |
| ಉಡುಪಿ | | 0 | 0 | 0 | 0 |
| ಉತ್ತರ ಕನ್ನಡ | | 0 | 0 | 0 | 0 |
| 2019-20 ನೇ ಸಾಲು | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ | 0 | 0 | 0 | 0 |
| ಉಡುಪಿ | | 0 | 0 | 0 | 0 |
| ಉತ್ತರ ಕನ್ನಡ | | 0 | 0 | 0 | 0 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚೆಲೆ ಕೃಷಿ | 0 | 0 | 0 | 0 |
| ಉಡುಪಿ | | 6.156 | 4.104 | 10.260 | 10.260 |
| ಉತ್ತರ ಕನ್ನಡ | | 0 | 0 | 0 | 0 |

—— 0 ——